ಅಧ್ಯಾಯ ೩

ಭೂಸ್ವರೂಪಗಳು ಮತ್ತು ಜೀವನ

"ಮಾನವರ ಹೊರೆಯಿಂದ ಮುಕ್ತವಾಗಿರುವ ಹಲವು ಶಿಖರಗಳು, ಇಳಿಜಾರುಗಳು ಮತ್ತು ದೊಡ್ಡ ಬಯಲು ಪ್ರದೇಶಗಳನ್ನು ಹೊಂದಿರುವ, ವೈವಿಧ್ಯಮಯ ಸಂಪನ್ಮೂಲಗಳನ್ನು ಇರುವ, ಸಸ್ಯಗಳನ್ನು ಹೊಂದಿರುವ ಭೂಮಿಯು ನಮಗಾಗಿ ವಿಶಾಲವಾಗಲಿ ಮತ್ತು ಅದರ ಸಂಪತ್ತನ್ನು ನಮಗೆ ದಯಪಾಲಿಸಲಿ!... ಭೂಮಿಯು ನಮ್ಮ ತಾಯಿ ಮತ್ತು ನಾವು ಅವಳ ಮಕ್ಕಳು."

- ಅಥರ್ವ ವೇದ, ಭೂಮಿಸೂಕ್ತ ('ಭೂಮಿಗೆ ಸ್ತೋತ್ರ')



© NCERT not to be republished

ಕೆಲವು ಮುಖ್ಯ ಪ್ರಶ್ನೆಗಳು:

೧. ಭೂಸ್ವರೂಪಗಳ ಪ್ರಮುಖ ವಿಧಗಳು ಯಾವುವು ಮತ್ತು ಜೀವನ ಹಾಗೂ ಸಂಸ್ಕೃತಿಗೆ ಅವುಗಳು ಹೇಗೆ ಅಗತ್ಯವಾಗಿವೆ?

೨. ಪ್ರತಿಯೊಂದು ಭೂಸ್ವರೂಪದ ಜೊತೆಗೆ ಜೀವಿಗಳು ಹೊಂದಿರುವ ಸವಾಲು ಮತ್ತು ಅವಕಾಶಗಳಾವವು?

0681CH03

ಪರಿಚಯ

ಹಲವು ಸಸ್ತನಿಗಳಂತೆ ಮಾನವರು ಕೂಡ ಭೂಮಿಯ ಮೇಲೆ ವಾಸಿಸುತ್ತಾರೆ. ನೀವು ಗಮನಿಸಿದಂತೆ ಭೂಮಿಯು ಅನೇಕ ರೂಪ ಮತ್ತು ಲಕ್ಷಣಗಳನ್ನು ಹೊಂದಿದೆ. ಅದರ ಸ್ವರೂಪವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬಹಳಷ್ಟು ಭಿನ್ನವಾಗಿರುತ್ತದೆ. ನೀವು ಜಾರ್ಖಂಡನ ಛೋಟಾ ನಾಗ್ಪುರ ಎಂದು ಕರೆಯಲ್ಪಡುವ ಪ್ರದೇಶದಿಂದ ರಸ್ತೆಯ ಮೂಲಕ ಪ್ರಯಾಣಿಸುತ್ತಿದ್ದೀರಿ ಎಂದು ಭಾವಿಸೋಣ. ಉತ್ತರ ಪ್ರದೇಶದ ಪ್ರಯಾಗ್ ರಾಜ್ ತಲುಪಿ ಮತ್ತು ಉತ್ತರಾಖಂಡದ ಅಲ್ಮೋರಾಗೆ ಹೋಗಿದ್ದೀರಿ. ನೀವು ದಾರಿಯಲ್ಲಿ ವಿಭಿನ್ನ ಭೂದೃಶ್ಯಗಳನ್ನು ನೋಡುತ್ತೀರಿ. ವಾಸ್ತವವಾಗಿ, ನೀವು ಮೂರು ಪ್ರಮುಖ ಭೂಸ್ವರೂಪಗಳನ್ನು ಎದುರಿಸುತ್ತೀರಿ. ಅವುಗಳನ್ನು ನಾವು ಈಗ ನೋಡುತ್ತೇವೆ.

ನಾವೀಗ ಅನ್ವೇಷಿಸೋಣ

→ ತರಗತಿಯ ಅಭ್ಯಾಸವಾಗಿ ನಾಲ್ಕು ಅಥವಾ ಐದು ವಿದ್ಯಾರ್ಥಿಗಳ ಗುಂಪುಗಳನ್ನು ರಚಿಸಿ ಮತ್ತು ಶಾಲೆಯ ಸುತ್ತಮುತ್ತಲಿನ ಪ್ರದೇಶಗಳನ್ನು ಗಮನಿಸಿ. ನೀವು ಯಾವ ರೀತಿಯ ಭೂಪ್ರದೇಶವನ್ನು ನೋಡುತ್ತೀರಿ? ಕೆಲವು ಕಿಲೋಮೀಟರ್‌ಗಳ ದೂರದ ನಂತರ ಭೂಪ್ರದೇಶವು ಬದಲಾಗುತ್ತದೆಯೇ? ಅಥವಾ ಸುಮಾರು ೫೦ ಕಿಲೋಮೀಟರ್‌ಗಳು ನಂತರ ಬದಲಾಗುತ್ತದೆಯೇ? ಇತರ ಗುಂಪುಗಳೊಂದಿಗೆ ಹೋಲಿಕೆ ಮಾಡಿ.

→ ಅದೇ ಗುಂಪುಗಳಲ್ಲಿ, ನಿಮ್ಮಲ್ಲಿ ಯಾರಾದರೂ ಭಾರತದ ಒಂದು ಪ್ರದೇಶದ ಮೂಲಕ ಮಾಡಿದ ಪ್ರಯಾಣವನ್ನು ಚರ್ಚಿಸಿ. ನೀವು ದಾರಿಯಲ್ಲಿ ಕಂಡುಕೊಂಡ ವಿವಿಧ ಭೂಪ್ರದೇಶಗಳನ್ನು ಪಟ್ಟಿ ಮಾಡಿ. ಇತರ ಗುಂಪುಗಳೊಂದಿಗೆ ಅವುಗಳನ್ನು ಹೋಲಿಕೆ ಮಾಡಿ.

ಎತ್ತರ: ಸಮುದ್ರ ಮಟ್ಟದಿಂದ ಒಂದು ವಸ್ತುವಿನ ಎತ್ತರ. ಉದಾಹರಣೆಗಳು: ಪರ್ವತ ಶಿಖರದ ಎತ್ತರ, ಹಾರಿತ್ತಿರುವ ಹಕ್ಕಿ ಅಥವಾ ವಿಮಾನದ ಎತ್ತರ, ಉಪಗ್ರಹದ ಎತ್ತರ.


ಭೂಸ್ವರೂಪವು ನಮ್ಮ ಭೂಮಿಯ ಮೇಲ್ಮೈಯಲ್ಲಿರುವ ಭೌತಿಕ ಲಕ್ಷಣವಾಗಿದೆ. ಭೂಸ್ವರೂಪಗಳು ಲಕ್ಷಾಂತರ ವರ್ಷಗಳಿಂದ ರೂಪುಗೊಂಡಿವೆ ಮತ್ತು ಪರಿಸರ-ಜೀವನದೊಂದಿಗೆ ಗಮನಾರ್ಹ ಸಂಬಂಧವನ್ನು ಹೊಂದಿವೆ. ಅವುಗಳನ್ನು ವಿಶಾಲವಾಗಿ ಮೂರು ವಿಧಗಳಾಗಿ ವಿಂಗಡಿಸಬಹುದು. **ಪರ್ವತಗಳು, ಪ್ರಸ್ಥಭೂಮಿಗಳು ಮತ್ತು ಬಯಲು ಪ್ರದೇಶಗಳು** (ಚಿತ್ರ ೩.೧).

ಈ ಭೂಸ್ವರೂಪಗಳು ವಿಭಿನ್ನ ಹವಾಮಾನವನ್ನು ಹೊಂದಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿಗಳಿಗೆ ನೆಲೆಯಾಗಿವೆ. ಮಾನವರು ಎಲ್ಲಾ ಭೂಸ್ವರೂಪಗಳಿಗೆ ಹೊಂದಿಕೊಂಡಿದ್ದಾರೆ. ಆದರೆ ವಿವಿಧ ರೀತಿಯ ಭೂಸ್ವರೂಪಗಳಲ್ಲಿ ವಾಸಿಸುವ ಜನರ ಸಂಖ್ಯೆ ಪ್ರಪಂಚದಾದ್ಯಂತ ವ್ಯತ್ಯಾಸವಾಗಿದೆ.

ಪರ್ವತಗಳು

ಪರ್ವತಗಳು ಸುತ್ತಮುತ್ತಲಿನ ಭೂಪ್ರದೇಶಕ್ಕಿಂತ ಹೆಚ್ಚು ಎತ್ತರದ ಭೂಪ್ರದೇಶವನ್ನು ಹೊಂದಿರುತ್ತವೆ. ಅವುಗಳನ್ನು ವಿಶಾಲವಾದ ಕಣಿವೆ, ಕಡಿದಾದ ಇಳಿಜಾರುಗಳು ಮತ್ತು ಕಿರಿದಾದ ಶಿಖರದಿಂದ ಗುರುತಿಸಬಹುದು. ಅವುಗಳ ಎತ್ತರವನ್ನು ಅವಲಂಬಿಸಿ, ಕೆಲವು ಪರ್ವತಗಳು ಹಿಮದಿಂದ ಆವೃತವಾಗಿರುತ್ತವೆ. ಪ್ರತಿ ಬೇಸಿಗೆಯಲ್ಲಿ ಕಡಿಮೆ **ಎತ್ತರದಲ್ಲಿರುವ** ಹಿಮವು ಕರಗುತ್ತದೆ ಮತ್ತು ನದಿಗಳನ್ನು ಪೋಷಿಸುವ ನೀರಾಗಿ ಬದಲಾಗುತ್ತದೆ. ಎತ್ತರದ

© NCERT not to be republished



ಚಿತ್ರ ೩.೧. ಈ ರೇಖಾಚಿತ್ರವು ಮೂರು ಭೂಸ್ವರೂಪಗಳನ್ನು ಚಿತ್ರಿಸುತ್ತದೆ - ಹಿನ್ನೆಲೆಯಲ್ಲಿರುವ ಪರ್ವತಗಳು (ಅವುಗಳಲ್ಲಿ ಎರಡು ಹಿಮದಿಂದ ಆವೃತವಾಗಿವೆ), ಎಡಭಾಗದಲ್ಲಿ ಪ್ರಸ್ಥಭೂಮಿ ಮತ್ತು ಮುಂಭಾಗದಲ್ಲಿ ಮೈದಾನ, ಪರ್ವತಗಳಿಂದ ಒಂದು ನದಿ ಹೊರಹೊಮ್ಮುತ್ತಿದೆ.

ಪ್ರದೇಶಗಳಲ್ಲಿ, ಹಿಮವು ಎಂದಿಗೂ ಕರಗುವುದಿಲ್ಲ, ಪರ್ವತವು ಶಾಶ್ವತವಾಗಿ ಹಿಮದಿಂದ ಆವೃತವಾಗಿರುತ್ತದೆ.

ಕಡಿಮೆ ಎತ್ತರದ ಕಡಿದಾದ ಕಣಿವೆಯ ಇಳಿಜಾರುಗಳು. ವೃತ್ತಾಕಾರದ ಮೇಲ್ಭಾಗಗಳನ್ನು ಹೊಂದಿರುವ ಇತರ ಎತ್ತರದ ಪ್ರದೇಶಗಳನ್ನು '**ಬೆಟ್ಟಗಳು**' ಎಂದು ಕರೆಯಲಾಗುತ್ತದೆ.

ಮಳೆ:
ವಾತಾವರಣದಿಂದ ಯಾವುದೇ ರೂಪದಲ್ಲಿ ನೆಲವನ್ನು ತಲುಪುವ ನೀರು- ಮಳೆ, ಹಿಮ ಮತ್ತು ಆಲಿಕಲ್ಲು ಗಳು ಮಳೆಯ ಅತ್ಯಂತ ಸಾಮಾನ್ಯ ರೂಪಗಳಾಗಿವೆ.

ಇದರ ಬಗ್ಗೆ ಆಲೋಚಿಸಿ

ಹಿಮ ಎಂದರೇನು? ನೀವು ಹಿಮಾವೃತ ಪ್ರದೇಶದಲ್ಲಿ ವಾಸಿಸದಿದ್ದರೆ (ಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಅರುಣಾಚಲ ಪ್ರದೇಶ) ನೀವು ಹಿಮವನ್ನು ಎಂದಿಗೂ ನೋಡಿರಲಿಕ್ಕಿಲ್ಲ! ಭಾರತದ ಉಳಿದ ಭಾಗಗಳಲ್ಲಿ ಹಿಮವು ಹೆಚ್ಚಾಗಿ ಮಳೆ ಮತ್ತು ಆಲಿಕಲ್ಲು ರೂಪದಲ್ಲಿದೆ. ಆದರೆ ಹೆಚ್ಚಿನ ಎತ್ತರ ಪ್ರದೇಶವು ಸಾಕಷ್ಟು ತಂಪಾಗಿದ್ದರೆ ಅಲ್ಲಿ ಹಿಮ ಬೀಳುತ್ತದೆ. ಭೂಪ್ರದೇಶವನ್ನು ಮೃದುವಾದ ಮತ್ತು ಸುಂದರವಾದ ಬಿಳಿ ಕಂಬಳಿಯಿಂದ ಆವರಿಸುತ್ತದೆ. ಹಿಮ ಮತ್ತು ಆಲಿಕಲ್ಲುಗಳು ಘನ ಸ್ಥಿತಿಯಲ್ಲಿರುವ ನೀರಿನ ಮಳೆಯಲ್ಲದೆ ಬೇರೇನೂ ಅಲ್ಲ.

© NCERT not to be republished



ಎವರೆಸ್ಟ್ ಪರ್ವತ



ಅಕೊಂಕಾಗುವಾ ಪರ್ವತ

ಕಿಲಿಮಂಜಾರೊ ಪರ್ವತ



ಬ್ಲಾಂಕ್ ಪರ್ವತ



ಕಾಂಚನಜುಂಗಾ ಪರ್ವತ



ಅನಮುಡಿ ಪರ್ವತ



ಚಿತ್ರ ೩.೨. ವಿಶ್ವದ ಆರು ಪರ್ವತಗಳ ಚಿತ್ರಗಳು

ವಿಶ್ವದ ಹೆಚ್ಚಿನ ಪರ್ವತಗಳನ್ನು ಏಷ್ಯಾದ ಹಿಮಾಲಯ, ಯುರೋಪಿನ ಆಲ್ಪ್ಸ್ ಮತ್ತು ದಕ್ಷಿಣ ಅಮೇರಿಕದ ಆಂಡಿಸ್‌ನಂತಹ ಪರ್ವತ ಶ್ರೇಣಿಗಳಂತೆ ವರ್ಗೀಕರಿಸಲಾಗಿದೆ. ಈ ಶ್ರೇಣಿಗಳಲ್ಲಿ ಕೆಲವು ಸಾವಿರಾರು ಕಿಲೋಮೀಟರ್‌ಗಳಷ್ಟು ವಿಸ್ತರಿಸಿವೆ.



ಚಿತ್ರ ೩.೩. ವಿಶ್ವದ ಆರು ಪರ್ವತಗಳ ಸಾಪೇಕ್ಷ ಎತ್ತರವನ್ನು ತೋರಿಸುವ ರೇಖಾಚಿತ್ರ

ಚಿತ್ರ. ೩.೨ ವಿಶ್ವದ ಆರು ಪರ್ವತಗಳ ಚಿತ್ರಗಳನ್ನು ತೋರಿಸುತ್ತದೆ. ಚಿತ್ರ ೩.೩ ಅವುಗಳನ್ನು ಒಟ್ಟುಗೂಡಿಸಿ ಹೆಚ್ಚಿನ ಎತ್ತರದಿಂದ ಕಡಿಮೆ ಎತ್ತರದಂತೆ ಅವುಗಳ ಸಾಪೇಕ್ಷ ಎತ್ತರಗಳ ದೃಶ್ಯ ಅನುಭವವನ್ನು ನೀಡುತ್ತದೆ. ಎವರೆಸ್ಟ್ ಪರ್ವತ (ಟಿಬೆಟ್, (ಚೀನಾ) ಮತ್ತು ನೇಪಾಳದ ನಡುವೆ) ಮತ್ತು ಕಾಂಚನಜುಂಗಾ (ನೇಪಾಳ ಮತ್ತು ಭಾರತದ ಸಿಕ್ಕಿಂ ರಾಜ್ಯದ ನಡುವೆ) ಹಿಮಾಲಯ ಶ್ರೇಣಿಯ ಎರಡು ಎತ್ತರದ ಶಿಖರಗಳಾಗಿವೆ. ಅಕೊಂಕಾಗುವಾ ಪರ್ವತ (ದಕ್ಷಿಣ ಅಮೆರಿಕಾದಲ್ಲಿ) ಆಂಡಿಸ್ನ ಅತಿ ಎತ್ತರದ ಶಿಖರವಾಗಿದೆ. ಪೂರ್ವ ಆಫ್ರಿಕಾದ ಕಿಲಿಮಂಜಾರೊ ಪರ್ವತವು ಯಾವುದೇ ಶ್ರೇಣಿಯ ಭಾಗವಲ್ಲದ ಪ್ರತ್ಯೇಕ ಹಿಮಪರ್ವತವಾಗಿದೆ. ಪಶ್ಚಿಮ ಯೂರೋಪಿನ ಬ್ಲಾಂಕ್ ಪರ್ವತ ಆಲ್ಪ್ಸ್ ಪರ್ವತಶ್ರೇಣಿಯ ಅತಿ ಎತ್ತರದ ಪರ್ವತವಾಗಿದೆ. ಆನಮುಡಿ (ಕೇರಳದಲ್ಲಿ, 'ಅನೈ ಶಿಖರ' ಎಂದೂ ಕರೆಯಲ್ಪಡುತ್ತದೆ) ದಕ್ಷಿಣ ಭಾರತದ ಅತಿ ಎತ್ತರದ ಪರ್ವತವಾಗಿದೆ.

© NCERT not to be republished

ಮೊಂಟೇನ್ ಅರಣ್ಯ : ಪರ್ವತ ಪ್ರದೇಶಗಳಲ್ಲಿ ಬೆಳೆಯುವ ಒಂದು ರೀತಿಯ ಕಾಡುಗಳು.

ಪಾಚಿ: ಹೂವುಗಳು ಅಥವಾ ನಿಜವಾದ ಬೇರುಗಳಿಲ್ಲದ ಸಣ್ಣ ಹಸಿರು ಸಸ್ಯ , ಆಗಾಗ್ಗೆ ಮೆತ್ತೆಯಂತಹ ಹೊದಿಕೆಯಲ್ಲಿ ಹರಡುತ್ತದೆ.

ಲಿಚೆನ್: ಸಾಮಾನ್ಯವಾಗಿ ಬಂಡೆಗಳು, ಗೋಡೆಗಳು ಅಥವಾ ಮರಕ್ಕೆ ಅಂಟಿಕೊಳ್ಳುವ ಸಸ್ಯದಂತಹ ಜೀವಿ.

ಹಿಮಾಲಯದಂತಹ ಎತ್ತರದ ಮತ್ತು ತೀಕ್ಷ್ಣವಾದ ಶಿಖರಗಳನ್ನು ಹೊಂದಿರುವ ಪರ್ವತಗಳು ತುಲನಾತ್ಮಕವಾಗಿ 'ಯುವ/ಹೊಸವಾಗಿವೆ', ಅಂದರೆ ಅವು ಭೂಮಿಯ ಇತಿಹಾಸದಲ್ಲಿ ಇತ್ತೀಚೆಗೆ ರೂಪುಗೊಂಡಿವೆ-ಆದರೂ ಅವು ಲಕ್ಷಾಂತರ ವರ್ಷಗಳ ಹಿಂದಿನವು! ಅರಾವಳಿ ಶ್ರೇಣಿಯಂತಹ ಚಿಕ್ಕದಾದ ಮತ್ತು ಹೆಚ್ಚು ದುಂಡಾದ ಪರ್ವತಗಳು ಮತ್ತು ಬೆಟ್ಟಗಳು ಹೆಚ್ಚು ಹಳೆಯವು ಮತ್ತು ಸವೆತದ ಕಾರಣದಿಂದಾಗಿ ದುಂಡಾಗಿವೆ. ಕೆಲವೊಮ್ಮೆ, ಹಿಮಾಲಯದಂತೆಯೇ, ಮೇಲೇರುವಿಕೆ ಮತ್ತು ಸವೆತವು ಇಂದಿಗೂ ಮುಂದುವರೆದಿದೆ. (ಅಂತಹ ಪ್ರಕ್ರಿಯೆಗಳು ಮತ್ತು ಅವುಗಳ ಕಾರಣಗಳ ಬಗ್ಗೆ ನೀವು ವಿಜ್ಞಾನದಲ್ಲಿ ಹೆಚ್ಚು ಕಲಿಯುವಿರಿ; ಹಿಮಾಲಯದಂತಹ ವಿಶ್ವದ ಕೆಲವು ಪರ್ವತಗಳು ಇನ್ನೂ ಎತ್ತರದಲ್ಲಿ ಬೆಳೆಯುತ್ತಿವೆ ಎಂದು ಮಾತ್ರ ಇಲ್ಲಿ ಹೇಳೋಣ).

ಪರ್ವತ ಪರಿಸರ

ಪರ್ವತಗಳ ಕಣಿವೆಯ ಇಳಿಜಾರುಗಳು ಸಾಮಾನ್ಯವಾಗಿ '**ಪರ್ವತ ಕಾಡು**' ಎಂದು ಕರೆಯಲ್ಪಡುವ ಒಂದು ಬಗೆಯ ಅರಣ್ಯದಿಂದ ಆವೃತವಾಗಿವೆ. ಅಲ್ಲಿ ಪೈನ್, ಫರ್, ಸ್ಪ್ರೂಸ್ ಮತ್ತು ದೇವದಾರುಗಳಂತಹ ಕೋನಿಫರ್ ಮರಗಳು ಸಾಮಾನ್ಯವಾಗಿವೆ. ಈ ಕೋನಿಫರ್ ಮರಗಳು ತೆಳುವಾದ, ಮೊನಚಾದ ಎಲೆಗಳೊಂದಿಗೆ ಎತ್ತರದ ಮತ್ತು ಕೋನ್ ಆಕಾರದಲ್ಲಿ ಬೆಳೆಯುತ್ತವೆ. ಹೆಚ್ಚಿನ ಎತ್ತರದಲ್ಲಿ, ಮರಗಳು ಹುಲ್ಲು, **ಪಾಚಿ** ಮತ್ತು **ಲಿಚೆನ್‌ಗಳಿಗೆ** ದಾರಿ ಮಾಡಿಕೊಡುತ್ತವೆ.

ಪ್ರಾಚೀನ ಭಾರತದ ಶ್ರೇಷ್ಠ ಕವಿ ಎಂದು ಪರಿಗಣಿಸಲ್ಪಟ್ಟ, ಸು. ೧,೫೦೦ವರ್ಷಗಳ ಹಿಂದೆ ಜೀವಿಸಿದ್ದ ಕಾಳಿದಾಸನ ದೀರ್ಘ ಕವಿತೆಯ ಎರಡು ಶ್ಲೋಕಗಳು ಇಲ್ಲಿವೆ. ಕುಮಾರಸಂಭವ ಎಂಬ ಕಾವ್ಯವು ಹಿಮಾಲಯದ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. (ಸಂಸ್ಕೃತದ ಸರಳೀಕೃತ ಅನುವಾದ ಕೆಳಗಿನಂತಿದೆ.)

ಉತ್ತರದಲ್ಲಿ ಪರ್ವತಗಳ ಅಧಿಪತಿಯಾದ ಹಿಮಾಲಯನು ಜೀವಂತ ದೇವರಂತೆ ಉದಯಿಸುತ್ತಾನೆ. ಅವನು ಭೂಮಿಯನ್ನು ಆಳುತ್ತಾನೆ ಮತ್ತು ಪಶ್ಚಿಮದಿಂದ ಪೂರ್ವ ಸಾಗರಗಳವರೆಗೆ ವಿಸ್ತಾರವಾಗಿದ್ದಾನೆ.... ಅಲ್ಲಿಂದ ಗಾಳಿಯು ಕೆಳಗೆ ಬರುತ್ತದೆ. ಗಂಗೆಯಲ್ಲಿ ಇಳಿಯುವ ಸಿಂಪಡಣೆಯನ್ನು ಹೊತ್ತುಕೊಂಡು, ದೇವದಾರು ಮರಗಳನ್ನು ಅಲುಗಾಡಿಸುತ್ತದೆ. ನವಿಲುಗಳ ಸುಂದರ ಗರಿಗಳನ್ನು ಬಿಚ್ಚುತ್ತವೆ. ಮತ್ತು ಜಿಂಕೆಗಳನ್ನು ಬೇಟೆಯಾಡಿದ ನಂತರ ಪರ್ವತ ಜನರನ್ನು ಸಂತೋಷಭರಿತವಾಗಿಸುತ್ತದೆ.

ಪದ್ಯಗಳು ಮತ್ತು ಈ ಕೆಳಗಿನ ಪ್ರಶ್ನೆಗಳನ್ನು ತರಗತಿಯಲ್ಲಿ ಚರ್ಚಿಸಿ.

- 'ಪಶ್ಚಿಮದಿಂದ ಪೂರ್ವ ಸಾಗರಗಳು' ಎಂದರೇನು? ಚಿತ್ರ ೫.೨ ರಲ್ಲಿ ನೀವು ಅವುಗಳನ್ನು ಮತ್ತು 'ಪರ್ವತಗಳ ದೇವರನ್ನು'ಕಂಡುಹಿಡಿಯಬಹುದೇ?
- ಗಂಗಾ ನದಿಯನ್ನು ಇಲ್ಲಿ ಏಕೆ ಉಲ್ಲೇಖಿಸಲಾಗಿದೆ? (ಸೂಚನೆ: ಹಲವಾರು ಕಾರಣಗಳಿರಬಹುದು.)

© NCERT not to be republished



ಪೆರೆಗ್ರಿನ್ ಫಾಲ್ಕನ್



ಹಿಮಾಲಯನ್ ತಹರ್

ಪರ್ವತ ಮೊಲ

ಗೋಲ್ಡನ್ ಈಗಲ್

ಕೆನಡಿಯನ್ ಲಿಂಕ್ಸ್

ಯಾಕ್

ಐಬೆಕ್ಸ್

ಬೂದು ನರಿ

© NCERT not to be republished

ಚಿರತೆ

ಕಪ್ಪು ಕರಡಿ





ಚಿತ್ರ ೩.೪. ಕೆಲವು ಪರ್ವತ ಪ್ರಾಣಿಗಳು

ಆಳ ಕಣಿವೆಯ ಕಾಡುಗಳು, ಹರಿಯುವ ನದಿಗಳು, ಸರೋವರಗಳು, ಹುಲ್ಲುಗಾವಲುಗಳು ಮತ್ತು ಪರ್ವತಗಳಲ್ಲಿನ ಗುಹೆಗಳು ವೈವಿಧ್ಯಮಯ ಪ್ರಾಣಿಗಳಿಗೆ ಆವಾಸ ತಾಣವಾಗಿವೆ. ಉದಾಹರಣೆಗೆ, ಗೋಲ್ಡನ್ ಇಗಲ್, ಪೆರೆಗ್ರಿನ್ ಫಾಲ್ಕನ್, ಕೆನಡಿಯನ್ ಲಿಂಕ್ಸ್, ಹಿಮ ಚಿರತೆ, ಐಬೆಕ್ಸ್, ಹಿಮಾಲಯನ್ ತಾಹರ್, ಪರ್ವತ ಮೊಲ, ಯಾಕ್, ಬೂದು ನರಿ ಮತ್ತು ಕಪ್ಪು ಕರಡಿ ಮೊದಲಾದವುಗಳು. (ಚಿತ್ರ ೩.೪).

ಇದನ್ನು ತಪ್ಪಿಸಬೇಡಿ:

'ಗಂಗಾ' ಎಂಬುದು ಮೂಲವಾಗಿ ಹಿಮಾಲಯದಲ್ಲಿ ಹುಟ್ಟುವ ಅತಿದೊಡ್ಡ ನದಿಯ ಭಾರತೀಯ ಹೆಸರಾಗಿದೆ. ಇಂಗ್ಲಿಷ್ನಲ್ಲಿ 'ಗಂಗಾ' ಎಂಬ ಪದವನ್ನೂ ಬಳಸಲಾಗುತ್ತದೆ. ಸುಮಾರು ೨,೫೦೦ಕಿ. ಮೀ. ಉದ್ದವಿರುವ ಈ ನದಿಯು ಹಲವಾರು ಉಪನದಿಗಳನ್ನು ಹೊಂದಿದೆ (ಅಂದರೆ, ಇತರ ನದಿಗಳು ಇದನ್ನು ಸೇರುತ್ತವೆ). ಅವುಗಳಲ್ಲಿ ಕೆಲವು, ಯಮುನಾ ಮತ್ತು ಘಾಗರಾಗಳಂತೆ, ಶಿವು ಸಹ ಹಿಮಾಲಯದಲ್ಲಿ ಹುಟ್ಟುತ್ತವೆ. ಸನ್ ಅಥವಾ ಸೋನೆಯಂತಹ ಇತರ ನದಿಗಳು ಗಂಗಾ ಬಯಲಿನ ದಕ್ಷಿಣಕ್ಕಿರುವ ವಿಂಧ್ಯ ಪರ್ವತಶ್ರೇಣಿಯಲ್ಲಿ ಹುಟ್ಟುತ್ತವೆ.



ಚಿತ್ರ ೩.೫. ಉತ್ತರ ಭಾರತದಲ್ಲಿನ ಟೆರೇಸ್ ಕೃಷಿ

ಭೂಪ್ರದೇಶ:
ಅದರ ಭೌತಿಕ ಲಕ್ಷಣಗಳ ದೃಷ್ಟಿಕೋನದಿಂದ ಒಂದು ತುಂಡು ಅಥವಾ ವಿಸ್ತಾರವಾದ ಭೂಮಿ.

ಪರ್ವತಗಳಲ್ಲಿನ ಜೀವನ

ಪರ್ವತ **ಭೂಪ್ರದೇಶವು** ಸಾಮಾನ್ಯವಾಗಿ ಗಟ್ಟಿಯಾಗಿರುತ್ತದೆ. ಕಡಿದಾದ ಇಳಿಜಾರುಗಳನ್ನು ಹೊಂದಿರುತ್ತದೆ. ಇದರರ್ಥ ನಿಯಮಿತ ಕೃಷಿಯನ್ನು ಕೆಲವು **ಕಣಿವೆಗಳಲ್ಲಿ** ಮಾತ್ರ ಮಾಡಬಹುದು. ಇಳಿಜಾರಿನಲ್ಲಿ ಮೆಟ್ಟಿಲುಗಳನ್ನು ಕತ್ತರಿಸುವ ಮೂಲಕ ಇಳಿಜಾರುಗಳಲ್ಲಿ ಕೃಷಿಯನ್ನು ಮಾಡಲಾಗುತ್ತದೆ (ಚಿತ್ರ ೩.೫). ಇದನ್ನು 'ಇಳಿಜಾರು ಮೆಟ್ಟಿಲು ಕೃಷಿ' (ಟೆರೇಸ್

ಫಾರ್ಮಿಂಗ್) ಎಂದು ಕರೆಯಲಾಗುತ್ತದೆ. ವಿಶ್ವದ ಅನೇಕ ಪರ್ವತ ಪ್ರದೇಶಗಳಲ್ಲಿ, ಕೃಷಿಗಿಂತ ಪಶುಪಾಲನೆಯು ಆದ್ಯತೆಯ ಉದ್ಯೋಗವಾಗಿದೆ.

ಪರ್ವತಗಳಲ್ಲಿ ವಾಸಿಸುವ ಜನರಿಗೆ ಪ್ರವಾಸೋದ್ಯಮವು ಆದಾಯದ ಪ್ರಮುಖ ಮೂಲವಾಗಿದೆ. ಅಲೆಯಾಗಿ ಬೀಸುವ ಪರ್ವತ ಗಾಳಿ ಮತ್ತು ರಮಣೀಯ ಸೌಂದರ್ಯವು ಅನೇಕ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕೆಲವು ಪ್ರವಾಸಿಗರು ಜಾರುತಟ್ಟೆ, ಪರ್ವತ ನಡಿಗೆ, ಪರ್ವತಾರೋಹಣ ಮತ್ತು ಇಳಿಜಾರಿನಲ್ಲಿ ಪಾರಾಚೂಟ್ ಬಳಸಿ ಹಾರುವ-(ಪ್ಯಾರಾಗ್ಲೈಡಿಂಗ್) ಮೊದಲಾದ ಕ್ರೀಡೆಗಳಿಗಾಗಿ ಪರ್ವತಗಳಿಗೆ ಹೋಗುತ್ತಾರೆ. ಅನೇಕ ಶತಮಾನಗಳಿಂದ ಜನರು ಪವಿತ್ರ ಸ್ಥಳಗಳಿಗೆ ತೀರ್ಥಯಾತ್ರೆಗಾಗಿ ಎತ್ತರದ ಪ್ರದೇಶಗಳಿಗೆ ಪ್ರಯಾಣಿಸುತ್ತಾರೆ. ಆದರೆ ಪ್ರವಾಸಿಗರ ಅತಿಯಾದ ಜನದಟ್ಟನೆಯಲ್ಲಿ ಬರುವುದರಿಂದ ಸೂಕ್ಷ್ಮ ಪರ್ವತದ ಪರಿಸರವು ಒತ್ತಡಕ್ಕೆ ಸಿಲುಕಿಸುತ್ತದೆ. ಸರಿಯಾದ ಸಮತೋಲನವನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ.

ಕಣಿವೆ: ಬೆಟ್ಟ ಗಳು ಅಥವಾ ಪರ್ವತಗಳ ನಡುವಿನ ತಗ್ಗು ಪ್ರ ದೇಶ, ಆಗಾಗ್ಗೆ ಅದರ ಮೂಲಕ ನದಿ ಅಥವಾ ತೊರೆ ಹರಿಯುತ್ತ ದೆ.

ಇದನ್ನು ತಪ್ಪಿಸಬೇಡಿ

- **ಬಚೇಂದ್ರಿ ಪಾಲ್** ಚಿಕ್ಕ ವಯಸ್ಸಿನಿಂದಲೇ ಪರ್ವತಗಳನ್ನು ಏರಲು ಪ್ರಾರಂಭಿಸಿದರು ಮತ್ತು ಹಲವು ಮಹಿಳಾ ಪರ್ವತಾರೋಹಣ ಯಾತ್ರೆಗಳನ್ನು ಮುನ್ನಡೆಸಿದರು. ಅವರು ೧೯೮೪ ರಲ್ಲಿ ಮೌಂಟ್ ಎವರೆಸ್ಟ್ ಅನ್ನು ಏರಿದ ಮೊದಲ ಭಾರತೀಯ ಮಹಿಳೆಯಾಗಿದ್ದರು ಮತ್ತು ಅದೇ ವರ್ಷ ಪದ್ಮಶ್ರೀ ಪಡೆದ್ದರು (೨೦೧೯ ರಲ್ಲಿ ಪದ್ಮಭೂಷಣ) ಪಡೆದರು.
- **ಅರುಣಿಮಾ ಸಿನ್ಹಾ** ಅವರು ತಮ್ಮ ೩೧ ನೇ ವಯಸ್ಸಿನಲ್ಲಿ ಅಪಘಾತವೊಂದರಲ್ಲಿ ಒಂದು ಕಾಲನ್ನು ಕಳೆದುಕೊಂಡರು. ಬಚೇಂದ್ರಿ ಪಾಲ್ ಅವರ ಪ್ರೋತ್ಸಾಹ ಮತ್ತು ತರಬೇತಿಯಿಂದ ಅವರು ೨೦೧೩ ರಲ್ಲಿ ಮೌಂಟ್ ಎವರೆಸ್ಟ್ ಅನ್ನು ಏರುವಲ್ಲಿ ಯಶಸ್ವಿಯಾದರು. ಅಂಟಾರ್ಕ್ಟಿಕಾದ ಮೌಂಟ್ ವಿನ್ಸನ್ ಸೇರಿದಂತೆ ಪ್ರತಿಯೊಂದು ಖಂಡದ ಅತ್ಯುನ್ನತ ಶಿಖರವನ್ನು ಏರಿದರು. ಅವರಿಗೆ ೨೦೧೫ ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಯಿತು.

ನಾವೀಗ ಅನ್ವೇಷಿಸೋಣ

ಈ ಚಿತ್ರಗಳು (ಚಿತ್ರ ೩.೬ ಪುಟ್ಟ ೫೦ ರಲ್ಲಿರುವ) ಪರ್ವತಗಳಲ್ಲಿ ವಾಸಿಸುವ ಜನರು ಎದುರಿಸಬಹುದಾದ ಕೆಲವು ಸವಾಲುಗಳನ್ನು ಚಿತ್ರಿಸುತ್ತದೆ. ಅವುಗಳನ್ನು ತರಗತಿಯಲ್ಲಿ ಗುಂಪುಗಳಲ್ಲಿ ಚರ್ಚಿಸಿ ಮತ್ತು ಪ್ರತಿಯೊಂದಕ್ಕೂ ಒಂದು ಟಿಪ್ಪಣಿಯನ್ನು ಬರೆಯಿರಿ. ಅಂತಹ ಅನೇಕ ಸವಾಲುಗಳ ಹೊರತಾಗಿಯೂ ಜನರು ಇನ್ನೂ ಪರ್ವತಗಳಲ್ಲಿ ವಾಸಿಸಲು ಏಕೆ ಆಯ್ಕೆ ಮಾಡುತ್ತಾರೆ ಎಂಬುದನ್ನು ಸಹ ಚರ್ಚಿಸಿ.


© NCERT not to be republished

ದಿಢೀರ್ ಪ್ರವಾಹ: ಹಠಾತ್ ಸ್ಥಳೀಯ ಪ್ರವಾಹ, ಆಗಾಗ್ಗೆ ಮೇಘ/ಮೋಡಗಳ ಸ್ಫೋಟದಿಂದ ಉಂಟಾಗುತ್ತದೆ.

ಭೂಕುಸಿತ: ಪರ್ವತದಿಂದ ಮಣ್ಣು ಅಥವಾ ಬಂಡೆಯ ರಾಶಿಯ ಹಠಾತ್ ಕುಸಿತದಿಂದ ಉಂಟಾಗುತ್ತದೆ.

ಹಿಮಪಾತ: ಪರ್ವತದಿಂದ ಹಿಮ, ಮಂಜುಗಡ್ಡೆ ಅಥವಾ ಬಂಡೆಗಳ ಹಠಾತಾಗಿ ಬೀಳುವುದರಿಂದ; ಹಿಮ ಕರಗಲು ಪ್ರಾರಂಭಿಸಿದಾಗ ಹೆಚ್ಚಾಗಿ ಸಂಭವಿಸುತ್ತದೆ.

ಮೇಘ/ಮೋಡ ಸ್ಫೋಟ: ಹಠಾತ್ ಹಿಂಸಾತ್ಮಕ ಮಳೆ ಬಿರುಗಾಳಿ.



ದಿಢೀರ್ ಪ್ರವಾಹ

ಭೂಕುಸಿತ



ಹಿಮಪಾತ

ಅನಿಯಂತ್ರಿತ ಪ್ರವಾಸೋದ್ಯಮ

ಭಾರೀ ಹಿಮಪಾತ/ಮಳೆ



ಮೇಘಸ್ಫೋಟ

ಶೀತ ಹವಾಮಾನ

ಚಿತ್ರ ೩.೬. ಪರ್ವತಗಳಲ್ಲಿನ ಜೀವನವು ಶುದ್ಧ ಗಾಳಿಯಿಂದ ಸುಂದರವಾದ ದೃಶ್ಯಾವಳಿಗಳವರೆಗೆ ನಿರ್ದಿಷ್ಟ ಸಕಾರಾತ್ಮಕ ಅಂಶಗಳನ್ನು ಹೊಂದಿದೆ. ಇದು ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಂಭಾವ್ಯ ಸವಾಲುಗಳನ್ನು ಸಹ ಒಳಗೊಂಡಿದೆ, ಅವುಗಳಲ್ಲಿ ಕೆಲವುಗಳನ್ನು ಈ ಚಿತ್ರಗಳಲ್ಲಿ ಚಿತ್ರಿಸಲಾಗಿದೆ.

© NCERT not to be republished

ಇದನ್ನು ತಪ್ಪಿಸಬೇಡಿ

ಪ್ರಪಂಚದಾದ್ಯಂತ ಹಲವು ಸಾಂಪ್ರದಾಯಿಕ ಸಮುದಾಯಗಳು ಪರ್ವತಗಳನ್ನು 'ಪವಿತ್ರ ಸ್ಥಳ'ಗಳೆಂದು ಪರಿಗಣಿಸುತ್ತವೆ ಮತ್ತು ಅವುಗಳನ್ನು ಪೂಜಿಸುತ್ತವೆ ಕೂಡ. ೮,೮೪೯ ಮೀ ಎತ್ತರವಿರುವ ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಅನೇಕ ಹೆಸರುಗಳನ್ನು ಹೊಂದಿದೆ. ಟಿಬೆಟಿಯನ್ನರು ಇದನ್ನು 'ಚೋಮೊಲುಂಗ್ಮಾ' ಎಂದು ಕರೆಯುತ್ತಾರೆ. ಅದರರ್ಥ 'ವಿಶ್ವದ ತಾಯಿ ದೇವತೆ' ಗಾಗೆಯೇ ಅವರು ಆ ಪರ್ವತವನ್ನು ಪೂಜಿಸುತ್ತಾರೆ. ನೇಪಾಳಿಗಳು ಅದನ್ನು 'ಸಾಗರಮಾತಾ' ಎಂದು ಕರೆಯುತ್ತಾರೆ ಅದರರ್ಥ 'ಆಕಾಶದ ದೇವತೆ' ಅಂತ. ಹಾಗೆಯೇ ಟಿಬೆಟಿನಲ್ಲಿರುವ ಕೈಲಾಸ ಪರ್ವತವನ್ನು ಹಿಂದೂ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ ಮತ್ತು ಬಾನ್ (ಪ್ರಾಚೀನ ಟಿಬೆಟಿಯನ್ ಧರ್ಮ) ಅನುಯಾಯಿಗಳು ಪವಿತ್ರವೆಂದು ಪರಿಗಣಿಸುತ್ತಾರೆ. ಪರ್ವತ ಶಿಖರಗಳ ಬಗ್ಗೆ ಅಂತಹ ಪೂಜ್ಯಭಾವನೆಯು ಭಾರತದ ಬೇರೆಕಡೆಗೆ ಮತ್ತು ವಿಶ್ವದ ಇತರ ಭಾಗಗಳಲ್ಲಿಯೂ ಕಂಡುಬರುತ್ತದೆ.

ಪ್ರಸ್ಥಭೂಮಿಗಳು

ಪ್ರಸ್ಥಭೂಮಿಯು ಸುತ್ತಮುತ್ತಲಿನ ಭೂಮಿಯಿಂದ ಮೇಲಕ್ಕೆ ಇರುವಂತಹ, ಹೆಚ್ಚು ಕಡಿಮೆ ಸಮತಟ್ಟಾದ ಮೇಲ್ಮೈಯನ್ನು ಹೊಂದಿರುವ ಭೂಪ್ರದೇಶವಾಗಿದೆ. ಅದರ ಕೆಲವು ಬದಿಗಳು ಹೆಚ್ಚಾಗಿ ಕಡಿದಾದ ಇಳಿಜಾರು ಹೊಂದಿರುತ್ತವೆ. ಪರ್ವತಗಳಂತೆ, ಪ್ರಸ್ಥಭೂಮಿಗಳು ಭೂಮಿಯ ಇತಿಹಾಸದ ದೃಷ್ಟಿಯಿಂದ ಚಿಕ್ಕದಾಗಿರಬಹುದು ಅಥವಾ ಹಳೆಯದಾಗಿರಬಹುದು. ಪ್ರಸ್ಥಭೂಮಿಗಳಿಗೆ ಎರಡು ಉದಾಹರಣೆಗಳೆಂದರೆ ಟಿಬೆಟಿಯನ್ ಪ್ರಸ್ಥಭೂಮಿ. ಇದು ವಿಶ್ವದ ಅತಿದೊಡ್ಡ ಮತ್ತು ಅತಿ ಎತ್ತರದ ಪ್ರಸ್ಥಭೂಮಿ ಮತ್ತು ಡೆಕ್ಕನ್ ಪ್ರಸ್ಥಭೂಮಿ. ಪ್ರಸ್ಥಭೂಮಿಗಳ ಎತ್ತರವು ಕೆಲವು ನೂರು ಮೀಟರ್‌ಗಳಿಂದ ಹಲವಾರು ಸಾವಿರ ಮೀಟರ್‌ಗಳವರೆಗೆ ವಿಭಿನ್ನವಾಗಿರಬಹುದು.

ಇದನ್ನು ತಪ್ಪಸಬೇಡಿ

- ಟಿಬೆಟಿಯನ್ ಪ್ರಸ್ಥಭೂಮಿಯು ಸರಾಸರಿ ೪,೫೦೦ಮೀಟರ್ ಎತ್ತರವನ್ನು ಹೊಂದಿದೆ. ಇದನ್ನು 'ಭೂಮಿಯ ಮೇಲ್ಛಾವಣಿ/ಜಾರುಬಂಡೆ' ಎಂದು ಏಕೆ ಕರೆಯಲಾಗುತ್ತದೆ ಎಂಬುದನ್ನು ವಿವರಿಸುತ್ತದೆ! ಇದು ಪೂರ್ವದಿಂದ ಪಶ್ಚಿಮಕ್ಕೆ ೨೫೦೦ಕಿ. ಮೀ ಉದ್ದವಾಗಿದೆ. ಈ ಉದ್ದವು ಚಂಡಿಗಡ್‌ದಿಂದ ಕನ್ಯಾಕುಮಾರಿ ವರೆಗೆ ಆಗುತ್ತದೆ.
- ಮಧ್ಯ ಮತ್ತು ದಕ್ಷಿಣ ಭಾರತದ ಡೆಕ್ಕನ್ ಪ್ರಸ್ಥಭೂಮಿಯು ವಿಶ್ವದ ಅತ್ಯಂತ ಹಳೆಯ ಪ್ರಸ್ಥಭೂಮಿಗಳಲ್ಲಿ ಒಂದಾಗಿದೆ. ಇದು ಲಕ್ಷಾಂತರ ವರ್ಷಗಳ ಹಿಂದೆ ಜ್ವಾಲಾಮುಖಿ ಚಟುವಟಿಕೆಯ ಮೂಲಕ ರೂಪುಗೊಂಡಿತು.

ಪರ್ವತಗಳಂತೆ ಪ್ರಸ್ಥಭೂಮಿಗಳು ಸಹ ಖನಿಜ ನಿಕ್ಷೇಪಗಳಿಂದ ಸಮೃದ್ಧವಾಗಿವೆ. ಅವುಗಳನ್ನು 'ಖನಿಜಗಳ ಭಂಡಾರಗಳು' ಎಂದು ಕರೆಯಲಾಗುತ್ತದೆ. ಇದರ ಪರಿಣಾಮವಾಗಿ ಗಣಿಗಾರಿಕೆಯು ಪ್ರಸ್ಥಭೂಮಿಗಳಲ್ಲಿ ಒಂದು ಪ್ರಮುಖ ಚಟುವಟಿಕೆಯಾಗಿದೆ. ಅಲ್ಲಿ ವಿಶ್ವದ ಅನೇಕ ಅತಿದೊಡ್ಡ ಗಣಿಗಳು ಕಂಡುಬರುತ್ತವೆ. ಉದಾಹರಣೆಗೆ: ಪೂರ್ವ ಆಫ್ರಿಕನ್ ಪ್ರಸ್ಥಭೂಮಿಯು ಚಿನ್ನ ಮತ್ತು ವಜ್ರ ಗಣಿಗಾರಿಕೆಗೆ ಹೆಸರುವಾಸಿಯಾಗಿದೆ. ಭಾರತದಲ್ಲಿ

© NCERT not to be republished

ಛೋಟಾ ನಾಗ್ಪುರ ಪ್ರಸ್ಥಭೂಮಿಯಲ್ಲಿ ಕಬ್ಬಿಣ, ಕಲ್ಲಿದ್ದಲು ಮತ್ತು ಮ್ಯಾಂಗನೀಸ್ ನಂತಹ ಬೃಹತ್ತ ನಿಕ್ಷೇಪಗಳು ಕಂಡುಬರುತ್ತವೆ.

ಪ್ರಸ್ಥಭೂಮಿ ಪರಿಸರವು ಪ್ರಪಂಚದಾದ್ಯಂತ ಬಹಳ ವೈವಿಧ್ಯಮಯವಾಗಿದೆ. ಅನೇಕ ಪ್ರಸ್ಥಭೂಮಿಗಳು ಕಲ್ಲಿನ ಮಣ್ಣನ್ನು ಹೊಂದಿವೆ. ಇದು ಬಯಲು ಪ್ರದೇಶಗಳಿಗಿಂತ ಕಡಿಮೆ ಫಲವತ್ತಾಗಿಸುತ್ತದೆ. (ಮುಂದಿನ ವಿಭಾಗವನ್ನು ನೋಡಿ) ಆದ್ದರಿಂದ ಕೃಷಿಗೆ ಕಡಿಮೆ ಅನುಕೂಲಕರವಾಗಿದೆ. ಇದಕ್ಕೆ ಅಪವಾದವೆಂದರೆ ಲಾವಾ ಪ್ರಸ್ಥಭೂಮಿಗಳು. (ಜ್ವಾಲಾಮುಖಿ ಚಟುವಟಿಕೆಯ ಮೂಲಕ ರೂಪುಗೊಂಡವು) ಏಕೆಂದರೆ ಅವು ಹೆಚ್ಚಾಗಿ ಸಮೃದ್ಧವಾದ ಕಪ್ಪು ಮಣ್ಣನ್ನು ಹೊಂದಿರುತ್ತವೆ.

ಪ್ರಸ್ಥಭೂಮಿಗಳು ಅನೇಕ ಅದ್ಭುತ ಜಲಪಾತಗಳಿಗೆ ನೆಲೆಯಾಗಿದೆ. ದಕ್ಷಿಣ ಆಫ್ರಿಕಾದ ಜಾಂಬೆಜಿ ನದಿಯಲ್ಲಿರುವ ವಿಕ್ಟೋರಿಯಾ ಜಲಪಾತ, ಛೋಟಾ ನಾಗ್ಪುರ ಪ್ರಸ್ಥಭೂಮಿಯಲ್ಲಿರುವ ಸುಬರ್ನರೇಖಾ ನದಿಯಲ್ಲಿರುವ ಹುಂಡ್ರು ಜಲಪಾತ ಮತ್ತು ಪಶ್ಚಿಮ ಘಟ್ಟಗಳಲ್ಲಿರುವ ಶರಾವತಿ ನದಿಯಲ್ಲಿರುವ ಜೋಗ ಜಲಪಾತಗಳು ಅಂತಹ ಕೆಲವು ಜಲಪಾತಗಳಾಗಿವೆ. ನೊಹ್ಕಾಲಿಕೈ ಜಲಪಾತ (ಚಿತ್ರ ೩.೭) ಚಿರಾಪುಂಜಿ ಪ್ರಸ್ಥಭೂಮಿಯಿಂದ (ಮೇಘಾಲಯದಲ್ಲಿ) ೩೪೦ ಮೀಟರ್ ಕೆಳಗೆ ಬೀಳುತ್ತದೆ.



ಚಿತ್ರ ೩.೭. ಚಿರಾಪುಂಜಿ ಪ್ರಸ್ಥಭೂಮಿಯಿಂದ ಹೊರಹೊಮ್ಮುವ ನೊಹ್ಕಾಲಿಕೈ ಜಲಪಾತ


ಬಯಲು ಪ್ರದೇಶಗಳು

ಬಯಲು ಪ್ರದೇಶಗಳು ವಿಸ್ತಾರವಾದ ಸಮತಟ್ಟಾದ ಅಥವಾ ಕಡಿಮೆ ಉಬ್ಬುತಗ್ಗಾದ ಮೇಲ್ಮೈಯನ್ನು ಹೊಂದಿರುವ ಭೂಪ್ರದೇಶಗಳಾಗಿವೆ. ಅವುಗಳಿಗೆ ಯಾವುದೇ ದೊಡ್ಡ ಬೆಟ್ಟಗಳು ಅಥವಾ ಆಳವಾದ ಕಣಿವೆಗಳಿಲ್ಲ. ಅವು ಸಾಮಾನ್ಯವಾಗಿ ೩೦೦ ಮೀಟರ್‌ಗಿಂತ ಹೆಚ್ಚು ಎತ್ತರದಲ್ಲಿರುವುದಿಲ್ಲ.

ಸಮುದ್ರ ಮಟ್ಟ :
ಸಾಗರಗಳ ಮೇಲ್ಮೈಯ ಸರಾಸರಿ ಮಟ್ಟವನ್ನು 'ಸರಾಸರಿ ಸಮುದ್ರ ಮಟ್ಟ' ಎಂದೂ ಕರೆಯಲಾಗುತ್ತದೆ.

ಸಮುದ್ರ ಮಟ್ಟ.

ಬಯಲು ಪ್ರದೇಶಗಳು ಪರ್ವತ ಶ್ರೇಣಿಗಳಲ್ಲಿ ಹುಟ್ಟುವ ನದಿಗಳಿಂದ ರೂಪುಗೊಂಡ ಒಂದು ರೀತಿಯ ಮೈದಾನಗಳಾಗಿವೆ. ಅಲ್ಲಿ ಅವು ಬಂಡೆ, ಮರಳು ಮತ್ತು ಹೂಳಿನ ಕಣಗಳನ್ನು ಸಂಗ್ರಹಿಸುತ್ತವೆ. ಅವುಗಳನ್ನು 'ಸೆಡಿಮೆಂಟ್ಸ್' ಎಂದು ಕರೆಯಲಾಗುತ್ತದೆ. ಈ ಹೂಳುಗಳನ್ನು ಬಯಲು ಪ್ರದೇಶಗಳಿಗೆ ಸಾಗಿಸಲಾಗುತ್ತವೆ. ಅಲ್ಲಿ ನದಿಗಳು ಅವುಗಳನ್ನು ಸಂಗ್ರಹಿಸುತ್ತವೆ. ಇದು ಮಣ್ಣನ್ನು ತುಂಬಾ ಫಲವತ್ತಾಗಿಸುತ್ತದೆ. ಇದರ ಪರಿಣಾಮವಾಗಿ ಈ ಮೈದಾನಗಳು ಎಲ್ಲಾ ರೀತಿಯ ಬೆಳೆಗಳನ್ನು ಬೆಳೆಯಲು ಸೂಕ್ತವಾಗಿವೆ. ಮತ್ತು ಈ ಭೂಪ್ರದೇಶದಲ್ಲಿ ಕೃಷಿಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಬಯಲು ಪ್ರದೇಶಗಳು ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿಗಳನ್ನು ಸಹ ಪೋಷಿಸುತ್ತವೆ.




ಚಿತ್ರ ೩.೮. ಈ ವಿಶ್ವ ನಕ್ಷೆಯು ಕೆಲವು ಪ್ರಮುಖ ಪರ್ವತ ಶ್ರೇಣಿಗಳು, ಪ್ರಸ್ಥಭೂಮಿಗಳು ಮತ್ತು ಬಯಲು ಪ್ರದೇಶಗಳನ್ನು ತೋರಿಸುತ್ತದೆ.

ನಾವೀಗ ಅನ್ವೇಷಿಸೋಣ

ಪ್ರತಿಯೊಂದು ಹೆಸರಿಗೂ ಭೂಸ್ವರೂಪವನ್ನು ಸೇರಿಸಲು ಚಿತ್ರ ೩.೮ ರಲ್ಲಿನ ಬಣ್ಣದ ಕೋಡ್ ಅನ್ನು ಬಳಸಿ. ಉದಾಹರಣೆಗೆ, 'ಟಿಬೆಟಿಯನ್ ಪ್ರಸ್ಥಭೂಮಿ', 'ರಾಕಿ ಶ್ರೇಣಿ', 'ನೈಲ್ ಮೈದಾನ'. (ಈ ನಕ್ಷೆಯಲ್ಲಿರುವ ಹೆಸರುಗಳನ್ನು ನೀವು ನೆನಪಿಟ್ಟುಕೊಳ್ಳಬೇಕಾಗಿಲ್ಲ.)

© NCERT not to be republished



ಚಿತ್ರ ೩.೯. ಉಪಗ್ರಹದಿಂದ ಗಂಗಾ ಬಯಲಿನ ನೋಟ

ನಾವೀಗ ಅನೇಷಿಸೋಣ

ಚಿತ್ರ ೩.೯ ರಲ್ಲಿನ ಚಿತ್ರವನ್ನು ಉಪಗ್ರಹದಿಂದ ಪಡೆಯಲಾಗಿದೆ. ಇದು ಉತ್ತರ ಭಾರತದ ಒಂದು ಭಾಗವನ್ನು ಎತ್ತರದ ಪ್ರದೇಶದಿಂದ ಸೆರೆಹಿಡಿಯಲಾಗಿದೆ. ಚಿತ್ರವನ್ನು ತರಗತಿಯ ಚಟುವಟಿಕೆಯಾಗಿ ಗಮನಿಸಿ ಮತ್ತು ಚರ್ಚಿಸಿ.

→ ಗಂಗಾ ಬಯಲು ಯಾವ ಬಣ್ಣದಾಗಿದೆ?

→ ಬಿಳಿ ವಿಸ್ತಾರವು ಏನನ್ನು ಪ್ರತಿನಿಧಿಸುತ್ತದೆ?

→ ಚಿತ್ರದ ಕೆಳಗಿನ ಎಡಭಾಗದಲ್ಲಿರುವ ಕಂದು ವಿಸ್ತಾರವು ಏನನ್ನು ಪ್ರತಿನಿಧಿಸುತ್ತದೆ?

ಬಯಲು ಪ್ರದೇಶದಲ್ಲಿನ ಜೀವನ

ಸಾವಿರಾರು ವರ್ಷಗಳ ಹಿಂದೆ ಮೊದಲು ನಾಗರಿಕತೆಗಳು ಫಲವತ್ತಾದ ಬಯಲು ಪ್ರದೇಶಗಳಲ್ಲಿನ ನದಿಗಳ ಸುತ್ತಲೂ ವಿಕಾಸವನ್ನು ಹೊಂದಿದವು. ನಮ್ಮ ಕಾಲದಲ್ಲೂ ವಿಶ್ವದ ಜನಸಂಖ್ಯೆಯ ಹೆಚ್ಚಿನ ಭಾಗವು ಬಯಲು ಪ್ರದೇಶಗಳಲ್ಲಿ ವಾಸಿಸುತ್ತಿದೆ.

ಸುಮಾರು ೪೦ ಕೋಟಿ ಜನರು ಅಂದರೆ ಒಟ್ಟು ಭಾರತೀಯ ಜನಸಂಖ್ಯೆಯ ನಾಲ್ಕನೇ ಒಂದು ಭಾಗಕ್ಕಿಂತ ಹೆಚ್ಚು ಜನರು ಭಾರತದ ಗಂಗಾ ಬಯಲಿನಲ್ಲಿ ('ಗಂಗಾ ಬಯಲು' ಎಂದು ಕರೆಯಲಾಗುತ್ತದೆ) ವಾಸಿಸುತ್ತಿದ್ದಾರೆ. ವಿಶ್ವದ ಇತರ ಅನೇಕ ಬಯಲು ಪ್ರದೇಶಗಳಂತೆ ಈ ಪ್ರದೇಶದ ಜನರ ಪ್ರಮುಖ ಉದ್ಯೋಗಗಳಲ್ಲಿ ನದಿ ಮೀನುಗಾರಿಕೆ

© NCERT not to be republished

ಮತ್ತು ಕೃಷಿಯು ಮುಖ್ಯವಾಗಿವೆ. ಆಹಾರ ಬೆಳೆಗಳಾದ ಅಕ್ಕಿ, ಗೋಧಿ, ಮೆಕ್ಕೆಜೋಳ, ಬಾರ್ಲಿ ಮತ್ತು ಸಿರಿಧಾನ್ಯಗಳನ್ನು ಬೆಳೆಯಲಾಗುತ್ತದೆ. ಹತ್ತಿ, ಸೆಣಬು ಮತ್ತು ಸೆಣಬಿನಂತಹ ನಾರಿನ ಬೆಳೆಗಳನ್ನು ಸಹ ಗಂಗಾ ಬಯಲಿನಲ್ಲಿ ಬೆಳೆಯಲಾಗುತ್ತದೆ. ಸಾಂಪ್ರದಾಯಿಕ ಕೃಷಿಯು ಹೆಚ್ಚಾಗಿ ಮಳೆಯಾಧಾರಿತವಾಗಿದೆ. (ಅಂದರೆ ಮಳೆಯ ಮೂಲಕ ಕೃಷಿ). ಆದರೂ ಇತ್ತೀಚಿನ ದಶಕಗಳಲ್ಲಿ ಕೃಷಿಯು ನೀರಾವರಿ ವ್ಯವಸ್ಥೆಯ ಕಡೆಗೆ ಬದಲಾಗಿದೆ. ಕಾಲುವೆ ಮಾರ್ಗಗಳ ಮೂಲಕ ಅಥವಾ ಅಂತರ್ಜಲದಿಂದ ಪಂಪ್ ಮಾಡುವ ಮೂಲಕ ನೀರನ್ನು ಹೊಲಗಳಿಗೆ ಬಳಸಲಾಗುತ್ತದೆ. ನೀರಾವರಿಯು ಕೃಷಿ ಉತ್ಪಾದನೆಯನ್ನು ಹೆಚ್ಚಿಸಿದೆ ಆದರೆ ಇದು ಅಂತರ್ಜಲದ ಕುಸಿತಕ್ಕೆ (ಅಥವಾ ಇಳಿಕೆಗೆ) ಸಹ ಕಾರಣವಾಗಿದೆ. ಇದು ಈ ಪ್ರದೇಶದ ಕೃಷಿಯ ಭವಿಷ್ಯಕ್ಕೆ ಸಮಸ್ಯೆಯಾಗುತ್ತಿದೆ. ಗಂಗಾ ಬಯಲು ಪ್ರದೇಶವನ್ನು ಬಾಧಿಸುವ ಇತರ ಕೆಲವು ಸಮಸ್ಯೆಗಳಲ್ಲಿ ಹೆಚ್ಚಿನ ಜನಸಂಖ್ಯೆ ಮತ್ತು ಮಾಲಿನ್ಯ ಕೂಡ ಸೇರಿಕೊಂಡಿವೆ.

ಪರ್ವತ ಶ್ರೇಣಿಗಳಲ್ಲಿ ಅಥವಾ ಬಯಲು ಪ್ರದೇಶಗಳಲ್ಲಿ, ಪ್ರಪಂಚದಾದ್ಯಂತದ ನದಿಗಳು ಅಪಾರ ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ. ನಿರ್ದಿಷ್ಟವಾಗಿ ಹೇಳುವುದಾದರೆ, ಹಲವು ಸಮುದಾಯಗಳು ನದಿಯ ಮೂಲ, ಒಂದು ಅಥವಾ ಎರಡು ನದಿಗಳೊಂದಿಗೆ ಸಂಗಮ ಆಗುವುದನ್ನು ಪವಿತ್ರವೆಂದು ಭಾವಿಸಿವೆ. ಭಾರತದಲ್ಲಿ ಅಂತಹ ಸ್ಥಳಗಳು ಹಲವಾರು ಇದ್ದು; ಅಂತಹ ಸ್ಥಳಗಳಲ್ಲಿ ವಿಶೇಷವಾಗಿ ಹಬ್ಬಹರಿದಿನ, ಸಮಾರಂಭ ಮತ್ತು ಆಚರಣೆಗಳನ್ನು ನಡೆಸಲಾಗುತ್ತದೆ.

ಬಯಲು ಪ್ರದೇಶಗಳು ಸೌಮ್ಯವಾದ ಇಳಿಜಾರನ್ನು ಹೊಂದಿರುವುದರಿಂದ, ನದಿಯ ಸಂಚಾರವು ಸುಲಭವಾಗುತ್ತದೆ ಮತ್ತು ಬಹಳಷ್ಟು ಆರ್ಥಿಕ ಚಟುವಟಿಕೆಗಳನ್ನು ಬೆಂಬಲಿಸುತ್ತದೆ. ಹಿಂದಿನ ದಿನಗಳಲ್ಲಿಯೂ ಸಹ ಜನರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸಲು ನದಿಗಳನ್ನು ವ್ಯಾಪಕವಾಗಿ ಬಳಸುತ್ತಿದ್ದರು. ಇಂದಿಗೂ ಸಹ (ಚಿತ್ರ. ೩. ೧೦ ಪುಟ ೫೬ ರಲ್ಲಿ), ಗಂಗಾ ನದಿಯ ಉದ್ದಕ್ಕೂ ವಿಸ್ತಾರವಾದ ಪ್ರದೇಶಗಳಿವೆ, ಅಲ್ಲಿ ಜನರು ಓಡಾಡಲು ದೋಣಿಗಳನ್ನು ಬಳಸಲು ಇಷ್ಟಪಡುತ್ತಾರೆ!

ಸಂಗಮ: ಎರಡು ಅಥವಾ ಹೆಚ್ಚು ನದಿಗಳ ಸಂಗಮ ಸ್ಥಳ.

ನಾವೀಗ ಅನ್ವೇಷಿಸೋಣ

→ ಯಾವುದೇ ಸಮುದಾಯವು ಪವಿತ್ರವೆಂದು ಪರಿಗಣಿಸುವ ನಿಮ್ಮ ಪ್ರದೇಶದ ನದಿ ಮೂಲಗಳು ಅಥವಾ ಸಂಗಮ ಸ್ಥಳಗಳ ಉದಾಹರಣೆಗಳನ್ನು ನೀವು ನೀಡಬಹುದೇ?

→ ಹತ್ತಿರದ ನದಿಗೆ ಭೇಟಿ ನೀಡಿ ಮತ್ತು ಅಲ್ಲಿನ ಆರ್ಥಿಕ ಅಥವಾ ಸಾಂಸ್ಕೃತಿಕ ಎಲ್ಲಾ ಚಟುವಟಿಕೆಗಳನ್ನು ವೀಕ್ಷಿಸಿ. ಅವುಗಳನ್ನು ಬರೆದಿಟ್ಟುಕೊಳ್ಳಿ ಮತ್ತು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.

© NCERT not to be republished

→ ಭಾರತದ ಕೆಲವು ಜನಪ್ರಿಯ ಪ್ರವಾಸಿ ತಾಣಗಳನ್ನು ಹೆಸರಿಸಿ ಮತ್ತು ಅವುಗಳಿಗೆ ಸಂಬಂಧಿಸಿದ ಭೂಸ್ವರೂಪದ ವರ್ಗವನ್ನು ಗುರುತಿಸಿ.



ಚಿತ್ರ ೩.೧೦. ಗಂಗಾ ನದಿಯಲ್ಲಿನ ನದಿ ಸಾರಿಗೆ

ವಾಸ್ತವ ದೃಷ್ಟಿ:

ಸವಾಲುಗಳು ಮತ್ತು ತೊಂದರೆಗಳನ್ನು ಎದುರಿಸುವ, ಅವುಗಳಿಗೆ ಹೊಂದಿಕೊಳ್ಳುವ ಅಥವಾ ಅವುಗಳನ್ನು ಜಯಿಸುವ ಸಾಮರ್ಥ್ಯ

ಈ ಅಧ್ಯಾಯದಲ್ಲಿ, ನಾವು ಮೂರು ಪ್ರಮುಖ ಭೂಪ್ರದೇಶಗಳನ್ನು ಅನ್ವೇಷಿಸಿದೆವು. ಆದರೆ ಅದರ ಮೇಲ್ಮೈ ತುಂಬಾ ಸಂಕೀರ್ಣವಾಗಿದೆ ಮತ್ತು ತಜ್ಞರು ಇನ್ನೂ ಕೆಲವು ಭೂಪ್ರದೇಶಗಳನ್ನುಕುರಿತು ವ್ಯಾಖ್ಯಾನಿಸುತ್ತಾರೆ. ಅಂತಹ ಒಂದು ಭೂಪ್ರದೇಶವೆಂದರೆ ಮರುಭೂಮಿ. ಮರುಭೂಮಿಗಳನ್ನು ಬಹಳ ಕಡಿಮೆ ಮಳೆ ಬೀಳುವ ದೊಡ್ಡ ಮತ್ತು ಶುಷ್ಕ/ಒಣ ವಿಸ್ತಾರವಾದ ಮರಭೂಮಿ ಎಂದು ಪರಿಗಣಿಸಲಾಗುತ್ತದೆ. ಅಲ್ಲಿನ ಸಸ್ಯ ಮತ್ತು ಪ್ರಾಣಿಗಳು ಸಹ ವಿಶಿಷ್ಟವಾಗಿವೆ. ಆಫ್ರಿಕಾದ ಸಹಾರಾ ಮರುಭೂಮಿ ಅಥವಾ ಭಾರತೀಯ ಉಪಖಂಡದ ವಾಯುವ್ಯದಲ್ಲಿರುವ ಥಾರ್ ಮರುಭೂಮಿಯಂತಹ ಕೆಲವು ಮರುಭೂಮಿಗಳು ಬಿಸಿಯಾಗಿರುತ್ತವೆ. ಉಳಿದವು ಏಷ್ಯಾದ ಗೋಬಿ ಮರುಭೂಮಿಯಂತೆ ತಂಪಾಗಿರುತ್ತವೆ. (ಕೆಲವು ತಜ್ಞರು ಅಂಟಾರ್ಕ್ಟಿಕಾ ಖಂಡವನ್ನು ಮರುಭೂಮಿ ಎಂದು ವಿವರಿಸುತ್ತಾರೆ.)

ಕಠಿಣ ಜೀವನ ಸನ್ನಿವೇಶದ ಹೊರತಾಗಿಯೂ ಹೆಚ್ಚಿನ ಮಾನವರು ಮರುಭೂಮಿಗಳಿಗೆ ಹೊಂದಿಕೊಂಡಿದ್ದಾರೆ. ಭಾರತದಲ್ಲಿ ಥಾರ್ ಮರುಭೂಮಿಯಲ್ಲಿ ವಾಸಿಸುವವರು, ಅದರ ಮೂಲಕ ವಲಸೆ ಹೋಗುವ ಸಮುದಾಯಗಳು ಮರುಭೂಮಿಗೆ ಸಂಬಂಧಿಸಿದ ಜಾನಪದ ಹಾಡುಗಳು ಮತ್ತು ದಂತಕಥೆಗಳಂತಹ ಶ್ರೀಮಂತ ಸಾಂಸ್ಕೃತಿಕ ಸಂಪ್ರದಾಯಗಳನ್ನು ಹೊಂದಿರುವರು. ಮಾನವರು ಎಲ್ಲಾ ಭೂಸ್ವರೂಪಗಳನ್ನು ತಮ್ಮ ಜೀವನ ತಾಣವಾಗಿ ಮಾಡಿಕೊಂಡಿರುವ ವೈವಿಧ್ಯಮಯ ವಿಧಾನಗಳು ನಮ್ಮ ಹೊಂದಾಣಿಕೆ ಮನೋಭಾವಕ್ಕೆ ಸಾಕ್ಷಿಯಾಗಿವೆ.

ಮಾನವರು ಎಲ್ಲಾ ಭೂಪ್ರದೇಶಗಳನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿರುವ ವೈವಿಧ್ಯಮಯ ವಿಧಾನಗಳು ನಮ್ಮ ಹೊಂದಾಣಿಕೆ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಸಾಕ್ಷಿಯಾಗಿವೆ.

© NCERT not to be republished

ಪ್ರಾಚೀನ ತಮಿಳು ಸಂಗಂ ಕಾವ್ಯದ ಐದು ತಿನೈಗಳು ಕೆಲವು ನಿರ್ದಿಷ್ಟ ದೇವತೆಗಳು, ಜೀವನಶೈಲಿ, ಮನಸ್ಥಿತಿಗಳು ಅಥವಾ ಭಾವನೆಗಳಿಗೆ ಸಂಬಂಧಿಸಿದ ಐದು ಭೂದೃಶ್ಯಗಳ ವಿವರಣೆಯಿದೆ. (ಪ್ರೀತಿ, ಹಂಬಲ, ಪ್ರತ್ಯೇಕತೆ, ಜಗಳ, ಇತ್ಯಾದಿ). ಈ ಕೋಷ್ಟಕವು ಐದು ಭೂದೃಶ್ಯಗಳ ಗುಣಲಕ್ಷಣಗಳನ್ನು ಮತ್ತು ಪ್ರತಿಯೊಂದರಲ್ಲಿರುವ ಪ್ರಮುಖ ಮಾನವ ಉದ್ಯೋಗಗಳನ್ನು ಮಾತ್ರ ಪಟ್ಟಿ ಮಾಡಲಾಗಿದೆ:

ಟಿನೈ	ಭೂಪ್ರದೇಶ	ಮುಖ್ಯ ಉದ್ಯೋಗ
ಕುರಿಂಜಿ	ಪರ್ವತ ಪ್ರದೇಶಗಳು	ಬೇಟೆ ಮತ್ತು ಸಂಗ್ರಹಣೆ
ಮುಲ್ಲೈ	ಹುಲ್ಲುಗಾವಲು ಮತ್ತು ಕಾಡುಗಳು	ಜಾನುವಾರು ಸಾಕಣೆ
ಮರುದಮ್	ಫಲವತ್ತಾದ ಕೃಷಿ ಮೈದಾನಗಳು	ಕೃಷಿ
ನೆಯ್ದಾಲ್	ಕರಾವಳಿ ಪ್ರದೇಶಗಳು	ಮೀನುಗಾರಿಕೆ ಮತ್ತು ಸಮುದ್ರಯಾನ
ಪಾಲೈ	ಶುಷ್ಕ, ಮರುಭೂಮಿಯಂತಹ ಪ್ರದೇಶಗಳು	ಪ್ರಯಾಣ ಮತ್ತು ಹೋರಾಟ

ಈ ಐದು ತಿನೈಗಳು ನಾವು ನೋಡಿದ್ದಕ್ಕಿಂತ ವಿಭಿನ್ನ ಭೂಸ್ವರೂಪಗಳ ವರ್ಗೀಕರಣವನ್ನು ರೂಪಿಸುತ್ತವೆ. ಆದರೆ ಅವು ವೈವಿಧ್ಯಮಯ ಪ್ರದೇಶಗಳು ಮತ್ತು ಅವುಗಳ ಗುಣಲಕ್ಷಣಗಳ ಬಗ್ಗೆ ಸೂಕ್ಷ್ಮವಾದ ಅರಿವನ್ನು ಪ್ರತಿಬಿಂಬಿಸುತ್ತವೆ. ಅವು ಮಾನವೀಯತೆ ಮತ್ತು ನೈಸರ್ಗಿಕ ಪರಿಸರದ ನಡುವಿನ ಆಳವಾದ ಸಂಪರ್ಕವನ್ನು ಸಹ ಸೂಚಿಸುತ್ತವೆ. (ನೀವು ತಿನೈ ವಿವರಗಳನ್ನು ನೆನಪಿಟ್ಟುಕೊಳ್ಳುವ ಅಗತ್ಯವಿಲ್ಲ, ಆದರೆ ಅವರು ಪ್ರತಿಬಿಂಬಿಸುವ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಬೇಕು.)

ನಾವು ಮುಂದುವರಿಯುವ ಮೊದಲು ...

- ಭೂಸ್ವರೂಪಗಳನ್ನು ಮೂರು ಮುಖ್ಯ ವಿಧಗಳಾಗಿ ವಿಂಗಡಿಸಲಾಗಿದೆ - ಪರ್ವತಗಳು, ಪ್ರಸ್ಥಭೂಮಿಗಳು ಮತ್ತು ಬಯಲು ಪ್ರದೇಶಗಳು. ಅವು ತುಂಬಾ ವಿಭಿನ್ನ ಭೌತಿಕ ಗುಣಲಕ್ಷಣ ಮತ್ತು ಪರಿಸರ ವ್ಯವಸ್ಥೆಯನ್ನು ಹೊಂದಿವೆ.
- ಇತಿಹಾಸದುದ್ದಕ್ಕೂ, ಜನರ ಜೀವನ ಮತ್ತು ಚಟುವಟಿಕೆಗಳು ಅವರು ವಾಸಿಸುತ್ತಿದ್ದ ಭೂಸ್ವರೂಪದ ಪ್ರಕಾರದಿಂದ ಹೆಚ್ಚು ಪ್ರಭಾವಿತವಾಗಿವೆ. ಈ ಭೂಸ್ವರೂಪಗಳು ಪ್ರಪಂಚದಾದ್ಯಂತದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಭಾರತೀಯ ಸಂಸ್ಕೃತಿ, ವಿಶೇಷವಾಗಿ, ಅವುಗಳನ್ನು ವಿವಿಧ ರೀತಿಯಲ್ಲಿ ಆಚರಿಸಲಾಗಿದೆ.
- ಪ್ರತಿಯೊಂದು ಭೂಸ್ವರೂಪವು ವಿಭಿನ್ನ ಸವಾಲುಗಳನ್ನು ಮತ್ತು ಅವಕಾಶಗಳನ್ನು ಒದಗಿಸುತ್ತದೆ.

© NCERT not to be republished

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ನಿಮ್ಮ ಪಟ್ಟಣ/ ಹಳ್ಳಿ/ ನಗರವು ಯಾವ ರೀತಿಯ ಭೂಸ್ವರೂಪದಲ್ಲಿದೆ? ಈ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಯಾವ ವೈಶಿಷ್ಟ್ಯಗಳನ್ನು ನೀವು ನಿಮ್ಮ ಸುತ್ತಲು ನೋಡುತ್ತೀರಿ?

೨. ಛೋಟಾ ನಾಗ್ಪುರದಿಂದ ಪ್ರಯಾಗ್ ರಾಜ್ ಮತ್ತು ಅಲ್ಮೋರಾದ ನಮ್ಮ ಆರಂಭಿಕ ಪ್ರವಾಸಕ್ಕೆ ಹಿಂತಿರುಗೋಣ. ದಾರಿಯಲ್ಲಿ ನೀವು ಕಂಡ ಮೂರು ಭೂಸ್ವರೂಪಗಳನ್ನು ವಿವರಿಸಿ.

೩. ಭಾರತದ ಕೆಲವು ಪ್ರಸಿದ್ಧ ಯಾತ್ರಾ ಸ್ಥಳಗಳನ್ನು ಮತ್ತು ಅವುಗಳಲ್ಲಿ ಕಂಡುಬರುವ ಭೂಸ್ವರೂಪಗಳನ್ನು ಪಟ್ಟಿ ಮಾಡಿ.

ಸರಿಯೋ ತಪ್ಪೋ ಎಂದು ಹೇಳಿ -

- → ಹಿಮಾಲಯವು ವೃತ್ತಾಕಾರದ ಮೇಲ್ಭಾಗಗಳನ್ನು ಹೊಂದಿರುವ ಯುವ ಪರ್ವತಗಳಾಗಿವೆ.
- → ಪ್ರಸ್ಥಭೂಮಿಗಳು ಸಾಮಾನ್ಯವಾಗಿ ಕನಿಷ್ಠ ಒಂದು ಬದಿಯಲ್ಲಿ ತೀವ್ರವಾಗಿ ಏರುತ್ತವೆ.
- → ಪರ್ವತಗಳು ಮತ್ತು ಬೆಟ್ಟಗಳು ಒಂದೇ ರೀತಿಗೆ ಭೂಸ್ವರೂಪ ಸೇರಿವೆ.
- → ಭಾರತದ ಪರ್ವತಗಳು, ಪ್ರಸ್ಥಭೂಮಿಗಳು ಮತ್ತು ನದಿಗಳು ಒಂದೇ ರೀತಿಯ ಸಸ್ಯ ಮತ್ತು ಪ್ರಾಣಿಗಳನ್ನು ಹೊಂದಿವೆ.
- → ಗಂಗಾ ಯಮುನಾ ನದಿಯ ಉಪನದಿಯಾಗಿದೆ.
- → ಮರುಭೂಮಿಗಳು ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿಗಳನ್ನು ಹೊಂದಿವೆ.
- → ಕರಗುವ ಹಿಮವು ನದಿಗಳಿಗೆ ತುಂಬಿ ಹರಿಯುವಂತೆ ಮಾಡುತ್ತದೆ.
- → ಬಯಲು ಪ್ರದೇಶಗಳಲ್ಲಿ ಸಂಗ್ರಹವಾಗುವ ನದಿಗಳ ಹೂಳುಗಳು ಭೂಮಿಯನ್ನು ಫಲವತ್ತಾಗಿಸುತ್ತದೆ.
- → ಎಲ್ಲಾ ಮರುಭೂಮಿಗಳು ಬಿಸಿಯಾಗಿರುತ್ತವೆ.

೧. ಪದಗಳನ್ನು ಜೋಡಿಯಾಗಿ ಹೊಂದಿಸಿ:

ಮೌಂಟ್ ಎವರೆಸ್ಟ್	ಆಫ್ರಿಕಾ
ರಾಫ್ಟಿಂಗ್	ಪ್ರಪಂಚದ ಮೇಲ್ಭಾವಣಿ
ಒಂಟೆಗಳು	ಭತ್ತದ ಗದ್ದೆಗಳು
ಪ್ರಸ್ಥಭೂಮಿ	ಮರುಭೂಮಿ
ಗಂಗಾ ಬಯಲು ಪ್ರದೇಶಗಳು	ನದಿ
ಜಲಮಾರ್ಗ	ಗಂಗಾ
ಕಿಲಿಮಂಜಾರೊ ಪರ್ವತ	ಉಪನದಿ
ಯಮುನಾ	ಪರ್ವತಾರೋಹಣ

© NCERT not to be republished